ದಿನಾಂಕ ಃ 27.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಎಂ.ಎ. ವಕೀಲರವರಿಂದ ಃ**

1. ನನ್ನ ಸಂಬಂಧ, ನನ್ನ ಗಂಡನೊಂದಿಗೆ ಚೆನ್ನಾಗಿಲ್ಲ. ನಾವು ಈಗಲೂ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ. ನನ್ನ ಮತ್ತು ನನ್ನ ಗಂಡನ ಸಂಬಂಧ ಚೆನ್ನಾಗಿಲ್ಲ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ನಾನು ಈ ಹಿಂದೆ ಮಿಸ್.ಪೆಟಿಷನ್ ಹಾಕಿ ಏಕಪಕ್ಷೀಯ ತೀರ್ಪನ್ನು ಪ್ರಶ್ನಿಸಿದ್ದೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾನು 2022 ನೇ ಇಸವಿಯಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ಪ್ರಸುತ್ತ ಅಪೀಲನ್ನು ನಾನು 2024 ರಲ್ಲಿ ಹಾಕಿದ್ದೇನೆ ಎಂದರೆ ಸರಿ. ನನಗೆ ತಲೆ ನೋವು, ಹೊಟ್ಟೆ ನೋವು ಮತ್ತು ಅಸೌಖ್ಯ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ನೀಡಿಲ್ಲ. ಅಮಲ್ಜಾರಿ ಪ್ರಕರಣದಲ್ಲಿ ನನಗೆ ನೋಟಿಸು ಬಂದಿದೆ. ಆ ಬಳಿಕ ನಂತರ ಈ ಅಪೀಲು ಹಾಕಿದ್ದೇನೆ ಎಂದರೆ ಸರಿ.

2. ಅಸಲು ದಾವೆ ನಂಃ53/2018 ರಲ್ಲಿ ತೀರ್ಪು ಆದ ವಿಚಾರ ನನಗೆ 2023 ರಲ್ಲೇ ತಿಳಿದಿತ್ತು ಎಂದರೆ ಸರಿಯಲ್ಲ. ನವೆಂಬರ್ 2024 ರಲ್ಲಿ ನನಗೆ ಅಸಲು ದಾವೆ ನಂಃ 53/2018 ರಲ್ಲಿ ತೀರ್ಪು ಆದ ವಿಚಾರ ಗೊತ್ತಾಯಿತು. ತೀರ್ಪು ಆದ 11 ತಿಂಗಳ ನಂತರ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ. ನವೆಂಬರ್ ತಿಂಗಳಲ್ಲಿ ತೀರ್ಪಿನ ವಿಚಾರ ತಿಳಿದ ತಕ್ಷಣ, ಈ ಅಪೀಲು ಹಾಕಿದ್ದೇವೆ. ನನ್ನ ಮತ್ತು ನನ್ನ ಗಂಡನ ಸಂಬಂಧ ಚೆನ್ನಾಗಿರಲಿಲ್ಲ ಮತ್ತು ನನಗೆ ಅಸೌಖ್ಯ ಇದ್ದ ಕಾರಣ, ಸಮಯಕ್ಕೆ ಸರಿಯಾಗಿ ಅಪೀಲು ಹಾಕಿಲ್ಲ ಎಂದು ಈ ಪ್ರಕರಣಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡನ ಚೆನ್ನಾಗಿದ್ದರೂ, ನನಗೆ ಯಾವುದೇ ಅಸೌಖ್ಯ ಇಲ್ಲದೇ ಇದ್ದರೂ, ನನಗೆ ತೀರ್ಪಿನ ವಿಚಾರ ಮೊದಲೇ ತಿಳಿದಿದ್ದರೂ ಬೇಕೆಂದೇ ತಡವಾಗಿ ಅಪೀಲು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ** ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.